**ಪಾಠ–11** **ಮಾರ್ಚ್ 9–15**

# ಅಂತ್ಯಕಾಲದ ಏಳು ಉಪದ್ರವಗಳು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಬೇಕಾದ ಸತ್ಯವೇದ ವಾಕ್ಯಗಳು : ಪ್ರಕ 15:1, ಪ್ರಕ 7:1–3, ಪ್ರ 14:9,10, ಪ್ರಕ 16:16, 2 ಥೆಸ 2:9–12.

**ಸ್ಮರಣವಾಕ್ಯ : "ಕರ್ತನೇ, ನಿನ್ನ ನಾಮಕ್ಕೆ ಭಯಪಡದವರೂ ಅದನ್ನು ಘನವಾದದ್ದೆಂದು ಒಪ್ಪಿಕೊಳ್ಳದವರೂ ಯಾರಾದರೂ ಇದ್ದಾರೆ? ನೀನೊಬ್ಬನೇ ಪರಿಶುದ್ಧನು; ನಿನ್ನ ನೀತಿಯುಳ್ಳ ಕೃತ್ಯಗಳು ಪ್ರಕಾಶಕ್ಕೆ ಬಂದದರಿಂದ ಎಲ್ಲಾ ಜನಾಂಗಗಳು ಬಂದು ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು ಎಂದು ಹೇಳಿದರು"** ಪ್ರಕಟನೆ 15:4.

ಹರ್ಮಗೆದೋನ್ ಯುದ್ಧಕ್ಕೆ ಮೊದಲು ಭೂಮಿಯ ಮೇಲೆ ನಡೆಯುವ ಘಟನೆಗಳ ಸಾರಾಂಶವನ್ನು ಪ್ರಕಟನೆ 11:8 ರಲ್ಲಿ ನೋಡುತ್ತೇವೆ. 'ಜನಾಂಗಗಳು ಕೋಪಿಸಿಕೊಂಡವು ನಿನ್ನ ಕೋಪವು ಪ್ರಕಟವಾಯಿತು' ಈ ಘಟನೆಗಳು ಯೇಸುವು ಲೂಕ 21:25 ರಲ್ಲಿ ಕೊಡುವ ವಿವರಣೆಗೆ ಸರಿ ಹೊಂದುತ್ತದೆ. ಇದನ್ನು ದೇವರ ಕೋಪವು ಹಿಂಬಾಲಿಸುತ್ತದೆ, ಇವುಗಳು ತಾನೆ ಪಶ್ಚಾತ್ತಾಪ ಪಡದವನಿಗೆ ಆಗುವ ದೇವರ ನ್ಯಾಯತೀರ್ಪು: ಏಳು ಉಪದ್ರವಗಳು (ಪ್ರಕ 15:1).

ಪ್ರಕಟನೆ 15ನೇ ಅಧ್ಯಾಯವು ದೇವರ ರೌದ್ರವನ್ನು ತುಂಬಿದ ಏಳು ಪಾತ್ರೆಗಳನ್ನು ಹಿಡಿದ ಏಳು ದೂತರ ಚಿತ್ರವನ್ನು ನೀಡುತ್ತದೆ.

ಆದರೆ ಪಾತ್ರೆಯು ಸುರಿಯುವ ಮೊದಲು ದೇವರ ನಂಬಿಗಸ್ತಿಕೆ ಜನರಿಗೆ ಆಗುವ ಭವಿಷ್ಯ ನೋಟವಿದೆ (ಪ್ರಕ 15:1–4) ಇವರು ಮೃಗದ ಮೇಲೆ ಜಯ ಹೊಂದಿದವರೆಂದು ಮೃಗದ ವಿಗ್ರಹದ ಮೇಲೆ ಮತ್ತು ಆತನ ಹೆಸರನ್ನು ಸೂಚಿಸುವ ಅರಿಕೆಯ ಮೇಲೆ ಜಯಹೊಂದಿದವರೆಂದು ವರ್ಣಿಸಲ್ಪಟ್ಟಿದ್ದಾರೆ (ಪ್ರಕ 15:2).

ಗಾಜಿನ ಸಮುದ್ರದ ಬಳಿಯಲ್ಲಿ ನಿಂತು ದೇವರ ದಾಸನಾದ ಮೋಶೆಯ ಹಾಡನ್ನೂ ಯಜ್ಞದ ಕುರಿಯಾದಾತನ ಹಾಡನ್ನೂ ಹಾಡುತ್ತಾನೆ. ಇದು ಹೇಗಿರುತ್ತದೆ ಎಂದರೆ ಯೆಹೂದ್ಯರು ಕೆಂಪು ಸಮುದ್ರ ತೀರದಲ್ಲಿ ನಿಂತುಕೊಂಡು ಐಗುಪ್ತರ ಮೇಲೆ ದೇವರು ಜಯಹೊಂದಿದಾಗ ವಿಜಯೋತ್ಸವದ ಹಾಡನ್ನು ಹಾಡಿದಂತೆ ಇರುತ್ತದೆ (ವಿ.ಕಾಂ 15ನೇ ಅಧ್ಯಾಯ) ಈ ವಿಜಯಿಗಳಾದ ದೇವಜನರು ಪ್ರಕಟನೆ 14:1–5 ರಲ್ಲಿ ಹೇಳಿರುವ ಒಂದು ಲಕ್ಷದ ನಲ್ವತ್ನಾಲ್ಕು ಸಾವಿರ ಜನರನ್ನು ಸೂಚಿಸುತ್ತಾರೆ. ಮೃಗದ ಗುರುತನ್ನು ಹೊಂದಲು ತಿರಸ್ಕರಿಸುವ ನಿಮಿತ್ತ ಏಳು ಅಂತ್ಯಕಾಲದ ಉಪದ್ರವಗಳಿಂದ ಸಂರಕ್ಷಿಸಲ್ಪಡುತ್ತಾರೆ. ಆತನ ಎರಡನೇ ಬರೋಣದಲ್ಲಿ ಅವರ ಮರಣಾಧೀನ ದೇಹಗಳು ಅಮರತ್ವವನ್ನು ಧರಿಸಿಕೊಳ್ಳುವವು (1 ಕೊರಿಂಥ 15:51–54) ಮತ್ತು ಅವರು ಪುನರುತ್ಥಾನ ಹೊಂದಿದ ದೇವಜನರನ್ನು ಅಂತರಿಕ್ಷದಲ್ಲಿ ಯೇಸುಕ್ರಿಸ್ತನು ತನ್ನ ಬಲ ಪ್ರಭಾವದಲ್ಲಿ ಬರುವಾಗ ಸೇರಿಕೊಳ್ಳುತ್ತಾರೆ (1 ಥೆಸ 17).

**ಭಾನುವಾರ** **ಮಾರ್ಚ್ 10**

## ಕಡೆಯ ಏಳು ಉಪದ್ರವಗಳ ಅರ್ಥ

ಜನರು ಈಗಾಗಲೇ ತಮ್ಮ ಆಯ್ಕೆಯನ್ನು ದೇವರಿಗಾಗಿ ಇಲ್ಲವೇ ಬ್ಯಾಬಿಲೋನ್‌ಗಾಗಿ ಮಾಡಿರುತ್ತಾರೆ. ಆದಾಗ್ಯೂ ಯೇಸುಕ್ರಿಸ್ತನು ಬರುವ ಮುನ್ನ ಸೈತಾನನ ರೌದ್ರದ ನಾಶನದ ಗಾಳಿಯು ಹಿಡಿಯಲ್ಪಟ್ಟದ್ದು ಬೀಸುವಂತೆ ಬಿಡಲ್ಪಡುತ್ತದೆ (ಪ್ರಕ 7:1–3) ಅದರ ಬಳಿಕ ಏಳು ಉಪದ್ರವಗಳು ಸಂಭವಿಸುತ್ತದೆ.

**ಪ್ರಕಟನೆ 15:1ನ್ನು ವಿಮೋ 7 ರಿಂದ 11ನೇ ಅಧ್ಯಾಯವನ್ನು ಜೊತೆಯಾಗಿ ಓದಿರಿ : ಈ ಏಳು ಅಂತ್ಯ ಉಪದ್ರವಗಳಿಗೆ ಐಗುಪ್ತದೇಶದಲ್ಲಿ ನಡೆದ**

**ಉಪದ್ರವಗಳನ್ನು ಹಿನ್ನೆಲೆಯಂತೆ ಪರಿಗಣಿಸಲ್ಪಟ್ಟಿವೆ. ಇವುಗಳು ಉದ್ದೇಶ ಮತ್ತು ಅರ್ಥದಲ್ಲಿ ಏನನ್ನು ಬೋಧಿಸುತ್ತದೆ. ಐಗುಪ್ತ ದೇಶದಲ್ಲಿ ಸಂಭವಿಸಿದ ಉಪದ್ರವಗಳು ಪ್ರಬೋಧಕಗಳಾಗಿದ್ದು ಉದ್ದೇಶ ಮತ್ತು ಅರ್ಥದಲ್ಲಿ ಅಂತ್ಯಕಾಲದ ಉಪದ್ರವಗಳಿಗೆ ಹಿನ್ನೆಲೆಯಾಗಿವೆ, ಹೇಗೆ?**

ಈ ಏಳು ಉಪದ್ರವಗಳು ಕಡೆಯ ಉಪದ್ರವಗಳೆಂದು ಸೂಚಿತವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ 7 ತುತೂರಿಗಳ ಉಪದ್ರವಗಳು ಇಡೀ ಕ್ರೈಸ್ತಯುಗವನ್ನು ಒಳಗೊಂಡಿದ್ದು ವ್ಯಾಪ್ತಿಯಲ್ಲಿ ಮಿತಿಯುಳ್ಳವುಗಳಾಗಿವೆ. ಸುವಾರ್ತೆ ಇನ್ನೂ ಸಾರಲ್ಪಡುತ್ತಿರುವಾಗ ಇವುಗಳು ನೆರವೇರಲ್ಪಡುತ್ತದೆ (ಪ್ರಕ 10:8–11, ಪ್ರಕ 11:14) ಮತ್ತು ಮಧ್ಯಸ್ತಿಕೆ ನಡೆಯುತ್ತದೆ (ಪ್ರಕ 8:2–5) ಅವುಗಳು ಕರುಣೆಯಿಂದ ತುಂಬಿದವುಗಳಾಗಿದ್ದು ದೈವಜನರಿಗೆ ಪಶ್ಚಾತ್ತಾಪ ತರುವ ಉದ್ದೇಶ ಹೊಂದಿರುತ್ತವೆ.

ಮತ್ತೊಂದು ವಿಧದಲ್ಲಿ ಹೇಳುವುದಾದರೆ ಏಳು ಉಪದ್ರವಗಳು ಯೇಸುಕ್ರಿಸ್ತನ ಎರಡನೇ ಬರೋಣಕ್ಕೆ ಸ್ವಲ್ಪ ಮುಂಚೆ ಘಟಿಸುತ್ತವೆ. ನಮ್ಮನ್ನು ಬಿಡಿಸಿಕಾಯುವ ದೇವರ ಪ್ರೀತಿಗೆ ಫರೋಹನಂತೆ ತಮ್ಮ ಹೃದಯಗಳನ್ನು ಕಠಿಣ ಮಾಡಿಕೊಂಡು ಪಶ್ಚಾತ್ತಾಪ ಪಡದವರ ಮೇಲೆ ಈ ಉಪದ್ರವಗಳು ಸುರಿಸಲ್ಪಡುತ್ತವೆ (ಪ್ರಕ 16:11) ದೇವರ ರೌದ್ರವೆಂದರೆ ಜನರು ಮಾಡಿದ ಆಯ್ಕೆಗಳ ಮೇಲಿನ ನ್ಯಾಯತೀರ್ಪು (ರೋಮ 1:26–28) ಆವಾಗ ಕಳೆದು ಹೋದವರು ತಮ್ಮ ಆಯ್ಕೆಗಳಿಂದಾಗುವ ತತ್ಪರಿಣಾಮಗಳನ್ನು ಅಂದರೆ ಪ್ರತಿಫಲಗಳನ್ನು ಕೊಯ್ಯುತ್ತಾರೆ (ಅನುಭವಿಸುತ್ತಾರೆ).

**ಓದಿರಿ : ಪ್ರಕ 15:5–8ನ್ನು ವಿ.ಕಾಂ 40:35,35 ಮತ್ತು 1 ಅರಸು 8:10,11 ನ್ನು ಜೊತೆಯಾಗಿ ಓದಿರಿ. ಆ ಪವಿತ್ರ ಸ್ಥಾನದೊಳಗೆ ಪ್ರವೇಶಿಸುವುದಕ್ಕೆ ಯಾರಿಂದಲೂ ಆಗಲಿಲ್ಲವೆಂಬ ಹೇಳಿಕೆಯು (ಪ್ರಕ 15:8) ಕಡೆಯವರು ಉಪದ್ರವಗಳ ಸಮಯದ ಬಗ್ಗೆ ಏನನ್ನು ಸೂಚಿಸುತ್ತದೆ?**

ಯಾರೂ ಪವಿತ್ರಸ್ಥಾನವನ್ನು ಪ್ರವೇಶಿಸಲು ಆಗಲಿಲ್ಲ ಎಂಬ ಉಕ್ತಿಯು (ಪ್ರಕ 15:8) ಕೃಪಾಕಾಲದ ಅಂತ್ಯವನ್ನು ಸೂಚಿಸುತ್ತದೆ (ಪ್ರಕ 22:11). ಪರಲೋಕದ ದೇವದರ್ಶನ ಗುಡಾರದಲ್ಲಿ ಯೇಸುಕ್ರಿಸ್ತನ ಸೇವೆಯು ಮುಗಿಯುತ್ತಿದ್ದಂತೆ ಪಶ್ಚಾತ್ತಾಪ

ಪಡುವ ಅವಕಾಶ ಬಾಗಿಲುಗಳು ಎಂದೆಂದಿಗೂ ಮುಚ್ಚಲ್ಪಡುತ್ತವೆ. ಆದುದರಿಂದ ಕಡೆಯ ಉಪದ್ರವಗಳು ಯಾರಿಗೂ ಪಶ್ಚಾತ್ತಾಪವನ್ನು ತರುವುದಿಲ್ಲ. ಆದರೆ ಬ್ಯಾಬಿಲೋನನ್ನು ಆರಿಸಿಕೊಂಡವರ ಹೃದಯಗಳ ಕಾಠಿಣ್ಯತೆಯನ್ನು ಬಯಲು ಪಡಿಸುತ್ತವೆ ದೇವರನ್ನು ಇನ್ನೂ ಹೆಚ್ಚಾಗಿ ದ್ವೇಷಿಸುವ ಹಾಗೆ ಅವರನ್ನು ಪ್ರಚೋದಿಸುತ್ತವೆ (ಪ್ರಕ 16:9,11).

**ನಾವು ಲೋಕದಲ್ಲಿ ನಮ್ಮ ಸುತ್ತಮುತ್ತ ನೋಡುವಾಗ ಯಾವುದು ಕೆಡುತ್ತಾ ಹೋಗುತ್ತಿದೆ? ಉಪದ್ರವಗಳು ಬಹಳ ವಿಳಂಬವಾಗಿವೆ (ತಡವಾಗಿವೆ) ಎನ್ನುವ ಸಂಗತಿಯು ದೇವರ ಕರುಣೆ ಮತ್ತು ತಾಳ್ಮೆಯ ವಿಷಯದಲ್ಲಿ ಏನನ್ನು ಬೋಧಿಸುತ್ತವೆ?**

**ಸೋಮವಾರ** **ಮಾರ್ಚ್ 11**

## ಕಡೆಯ ಉಪದ್ರವಗಳ ಪ್ರವಾಹ (ಹೊಯ್ಯಲ್ಪಡುವ ಕಡೆಯ ಉಪದ್ರವಗಳು)

ಪರಲೋಕದ ದೇವದರ್ಶನ ಗುಡಾರದಲ್ಲಿ ಯೇಸುಕ್ರಿಸ್ತನ ಮಧ್ಯಸ್ತಿಕೆ ನಿಂತು ಹೋದಾಗ ಪ್ರತಿ ಮನುಷ್ಯನ ಗತಿಯು ಶಾಶ್ವತವಾಗಿ ನಿರ್ಧರಿಸಲ್ಪಡುತ್ತದೆ. ಸುವಾರ್ತೆಯನ್ನು ತಿರಸ್ಕಾರ ಮಾಡಿದವರು ದೇವರ ಕೋಪವನ್ನು ಪೂರ್ಣವಾಗಿ ಅನುಭವಿಸುವ ಸಮಯವು ಬರುತ್ತದೆ.

ಕಡೆಯ ಏಳು ಉಪದ್ರವಗಳು ಐಗುಪ್ತದ ಮೇಲೆ ಸುರಿದ ಉಪದ್ರವಗಳನ್ನು ಪ್ರತಿಬಿಂಬಿಸುತ್ತವೆ (ವಿ.ಕಾಂ 7ನೇ, 8ನೇ, 9ನೇ, 10ನೇ ಮತ್ತು 11ನೇ ಅಧ್ಯಾಯಗಳು). ಐಗುಪ್ತದ ಉಪದ್ರವಗಳು ಐಗುಪ್ತರ ಮೇಲೆ ಪರಿಣಾಮ ಬೀರಿದವುಗಳಾಗಿದ್ದವು. ಆದರೆ ಇಸ್ರಾಯೇಲ್ಯರನ್ನು ಮುಟ್ಟಲು ಸಾಧ್ಯವಾಗಲಿಲ್ಲ ಹಾಗೆಯೇ ದೇವಜನರು ಈವಾಗ ಬರುವ ಸಂಕಟ ಕಾಲದಲ್ಲಿ ರಕ್ಷಿಸಲ್ಪಡುತ್ತಾರೆ (ಕೀರ್ತ 91:3–10)– ಮಹಾಹೋರಾಟ, ಪುಟ 629, 630 ನೋಡಿರಿ.

ಐಗುಪ್ತದ ಮೇಲೆ ಸಂಬಂಧಿಸಿದ ಉಪದ್ರವಗಳು ಫರೋಹನ ಹೃದಯದ ಕಾಠಿಣ್ಯತೆಯನ್ನು ಬಹಿರಂಗಪಡಿಸಿದವು ಮತ್ತು ಅವರನ್ನು ರಕ್ಷಿಸಲಾರದ ಅವರ ದೇವರುಗಳ ಅಸಾಮರ್ಥ್ಯವನ್ನು ತೋರಿಸಿದವು. ಹಾಗೆಯೇ ಕಡೆಯಕಾಲದ

ಉಪದ್ರವಗಳು ಹೆಚ್ಚಾಚ್ಚಾಗಿ ಮೃಗದ ಆರಾಧಕರ ಹೃದಯಗಳನ್ನು ಕಠಿಣಪಡಿಸುತ್ತವೆ ಮತ್ತು ದೇವರ ನ್ಯಾಯತೀರ್ಪಿನಿಂದ ಅವರನ್ನು ರಕ್ಷಿಸಲಾರದ ಬ್ಯಾಬಿಲೋನಿನ ಅಶಕ್ತತೆಯನ್ನು ಬಯಲುಪಡಿಸುವವು. ಪ್ರಕ 16:1–11ನ್ನು ಓದಿರಿ ಇಲ್ಲಿ ಏನು ನಡೆಯುತ್ತಿದೆ ಮತ್ತು ಇದನ್ನು ಹೇಗೆ ಚಿತ್ರಿಸಲಾಗಿದೆ?

ಮೊದಲ ನಾಲ್ಕು ಉಪದ್ರವಗಳು ಸಾರ್ವತ್ರಿಕವಾದವುಗಳಲ್ಲ, ಹಾಗಲ್ಲದಿದ್ದರೆ ಭೂನಿವಾಸಿಗಳೆಲ್ಲರೂ ಮುಗಿದು ಹೋಗುತ್ತಿದ್ದರು (ಹತರಾಗುತ್ತಿದ್ದರು) ಎಲೆನ್ ಜಿ ವೈಟ್, ಮಹಾಹೋರಾಟ, ಪುಟ 628.

ಮೊದಲ ಉಪದ್ರವು ಮೃಗದ ಆರಾಧಕರಿಗೆ ಮಾತ್ರ ಆಗುತ್ತದೆ. ಗುರುತನ್ನು ಹೊಂದಿ ಅದರ ವಿಗ್ರಹಕ್ಕೆ ನಮಸ್ಕಾರ ಮಾಡುವ ಮನುಷ್ಯರ ಮೈ ಮೇಲೆ ಕೆಟ್ಟ ಉರಿಹುಣ್ಣು ಎದ್ದವು. ಎರಡು ಮತ್ತು ಮೂರನೇ ಉಪದ್ರವಗಳು ಸಮುದ್ರ, ನದಿಗಳು, ನೀರಿನ ಬುಗ್ಗೆಗಳು ಇವುಗಳ ನೀರುಗಳು ರಕ್ತವಾಯಿತು. ಕುಡಿಯುವುದಕ್ಕೆ ನೀರಿಲ್ಲದೆ, ಎದುರು ಬಿದ್ದ ಮನುಷ್ಯರು ಬದುಕುಳಿಯಲಾರರು. ನಾಲ್ಕನೇ ಉಪದ್ರವವು ಸೂರ್ಯನ ಮೇಲೆ ಪರಿಣಾಮ ಬೀರುತ್ತದೆ ಅದು ಜನರನ್ನು ಕಂದಿಸಿ ಸಹಿಸಲಾಗದ ನೋವನ್ನು ಉಂಟುಮಾಡಿತು.

ಸಹಿಸಲಾಗದ ನೋವನ್ನು ಉಂಟುಮಾಡಿದ ಉಪದ್ರವಗಳು ಕೆಟ್ಟ ಮನುಷ್ಯರ ಹೃದಯವನ್ನು ಮೃದುಗೊಳಿಸಲಾರವು. ಅವರ ಎದುರು ಬೀಳುವ ಮನೋ ಧೋರಣೆಯನ್ನು ಬದಲು ಮಾಡಲಾರವು. ಇದರಿಂದ ಅವರು ದೇವರನ್ನು ದೂಷಿಸಿ ಶಪಿಸುತ್ತಾರೆ. ಈ ಉಪದ್ರವಗಳನ್ನು ಅವರ ಮೇಲೆ ಉಂಟುಮಾಡಿದ ದೇವರನ್ನು ದೂಷಿಸಿ ಶಪಿಸುತ್ತಾರೆ. ಅವರು ಪಶ್ಚಾತ್ತಾಪವನ್ನೂ ಪಡುವುದಿಲ್ಲ. ಪ್ರಕಟನೆ 16:10,11 (ವಿ.ಕಾಂ 10:21–23 ನ್ನು ಸಹಾ ನೋಡಿರಿ) ರಲ್ಲಿ ಉಪದ್ರವವು ಮೃಗದ ಸಿಂಹಾಸನವನ್ನು ಬಡಿಯಿತು (ಪ್ರಕ 13:2). ಸೈತಾನನು ಈ ಸಿಂಹಾಸನವನ್ನು ಮೃಗಕ್ಕೆ ಕೊಟ್ಟಿರುತ್ತಾನೆ (ಪ್ರಕ 13:2). ಈವಾಗ ಸೈತಾನನ ಅಧಿಕಾರವೂ ಈ ಉಪದ್ರವಗಳ ಬಿರುಸನ್ನು ತಡೆಯಲಾರದು. ಅವರು ಉಪದ್ರವಗಳಿಂದ ಬಾಧಿಸಲ್ಪಡುವಾಗ ತಮ್ಮನ್ನು ಸಂರಕ್ಷಿಸಲು ಬ್ಯಾಬಿಲೋನು ಅಸಮರ್ಥವೆಂದು ಅರಿಯುತ್ತಾರೆ. ಆದಾಗ್ಯೂ ಅವರು ದೇವರ ವಿರುದ್ಧವಾಗಿ

ಮನಸ್ಸು ಮಾಡುತ್ತಾರೆ. ಆ ಉಪದ್ರವಗಳಿಂದ ಉಂಟಾದ ಭಯವೂ ಸಹ ಅವರ ಹೃದಯಗಳನ್ನು ಬದಲಾಯಿಸಲಾರದು.

**ನಮ್ಮ ಎಲ್ಲಾ ಕಷ್ಟಸಂಕಟಗಳ ನಡುವೆಯು ಆತನ ಮೇಲೆ ಭರವಸೆ ಇಡುವ ಪ್ರೀತಿಯ ಬಗ್ಗೆ ಸಾಕಷ್ಟು ತಿಳಿದಿದೆ. ದುರಂತ ತಟ್ಟಿದಾಗ ದೇವರೊಟ್ಟಿಗೆ ನಮ್ಮ ನಡಿಗೆಯನ್ನು ಹೇಗೆ ಮುಂದುವರೆಸಬಹುದು?**

**ಮಂಗಳವಾರ** **ಮಾರ್ಚ್ 12**

## ಯೂಫ್ರೆಟಿಸ್ ನದಿಯು ಒಣಗಿ ಹೋಗುವುದು

ಓದಿರಿ : ಪ್ರಕ 16:12ನ್ನು ಪ್ರಕ 17:1 ಮತ್ತು 15 ಜೊತೆಗೆ ಓದಿರಿ. ಯೂಫ್ರೆಟಿಸ್ ನದಿಯ ಸಂಕೇತವು ಯಾವುದಕ್ಕೆ ಅನ್ವಯವಾಗುತ್ತದೆ? ಏಳು ಉಪದ್ರವಗಳು ನಡೆಯುವ ಸಂದರ್ಭದಲ್ಲಿ ಯೂಫ್ರೆಟಿಸ್ ನದಿಯು ಒಣಗಿ ಹೋಗುವುದರ ಮಹತ್ವವೇನು?

ಹಳೆಯ ಒಡಂಬಡಿಕೆಯಲ್ಲಿ ಯೂಫ್ರೆಟಿಸ್ ನದಿಯು ಇಸ್ರಾಯೇಲ್ಯರ ವೈರಿಗಳಾದ ಅಶೂರ್ಯರಿಗೂ ಬ್ಯಾಬೀಲೋನಿಗೂ ವಿಷಮ ಸಂದರ್ಭದಲ್ಲಿ ಸಹಾಯ ಒದಗಿಸುತ್ತಿತ್ತು. ಈ ನದಿಯು ಬ್ಯಾಬಿಲೋನಿನಾದ್ಯಂತ ಹರಿಯುತ್ತಿತ್ತು. ಇದು ಜನರಿಗೆ ನೀರನ್ನು ಬೆಳೆಗಳಿಗೆ ಪೋಷಕವನ್ನು ಒದಗಿಸುತ್ತಿತ್ತು. ಯೂಫ್ರೆಟಿಸ್ ಇಲ್ಲದೆ ಬ್ಯಾಬಿಲೋನ್ ಬದುಕುಳಿಯಲು ಸಾಧ್ಯವಿರಲಿಲ್ಲ.

ಪ್ರಕಟನೆ 17:1 ಪ್ರಾಯಶಃ ನೀರಿನ ಮೇಲೆ ಕುಳಿತಿರುವ ಅಂತಿಮ ಕಾಲದ ಬ್ಯಾಬಿಲೋನ್‌ನನ್ನು ವರ್ಣಿಸುತ್ತದೆ. ನೀರುಗಳು ಪ್ರಾಯಶಃ ಯೂಫ್ರೆಟಿಸ್‌ಗೆ ಉಲ್ಲೇಖವಾಗಿದೆ (ನೋಡಿರಿ ಯೆರೆ 51:13) ಪ್ರಕ 17:15 ನೀರುಗಳ ಮೇಲೆ ಕುಳಿತಿರುವ ಅಂತ್ಯಕಾಲದ ಬ್ಯಾಬಿಲೋನನ್ನು ವಿವರಿಸುತ್ತದೆ. ಇಲ್ಲಿ ನೀರುಗಳು ಅದನ್ನು ಬೆಂಬಲಿಸುವ ಜನರನ್ನು ಅಂದರೆ ಪ್ರಪಂಚದಾದ್ಯಂತವಿರುವ ನಾಗರಿಕ, ಜಾತ್ಯಾತೀತ, ರಾಜಕೀಯ ಅಧಿಕಾರವನ್ನು ಪ್ರತಿನಿಧಿಸುತ್ತದೆ. ಆದಾಗ್ಯೂ ಅಂತೇಯವಾಗಿ ಈ ಅಧಿಕಾರ ವ್ಯವಸ್ಥೆಯು ಬ್ಯಾಬಿಲೋನ್‌ಗೆ ಕೊಟ್ಟಿದ್ದ ತನ್ನ ಬೆಂಬಲವನ್ನು ಹಿಂಪಡೆದುಕೊಳ್ಳುತ್ತದೆ.

6ನೇ ಉಪದ್ರವದ ದೃಶ್ಯವು ಪರ್ಶಿಯಾದ ರಾಜ ಸೈರಸ್ ಪುರಾತನ ಬ್ಯಾಬಿಲೋನನ್ನು ವಶಪಡಿಸಿಕೊಂಡದ್ದನ್ನು ಪ್ರತಿಬಿಂಬಿಸುತ್ತದೆ (ದಾನಿಯೇಲ 5ನೇ ಅಧ್ಯಾಯ) ಪ್ರಾಚೀನ ಇತಿಹಾಸಗಾರ/ ಚಾರಿತ್ರಗಾರನಾದ ಹೆರೋಡೊಟಸ್‌ನ ಪ್ರಕಾರ ಅರಸನಾದ ಬೇಲ್ಶೆಚ್ಚರನು ಮತ್ತು ಅವನ ಮಂತ್ರಿಗಳು ಔತಣವನ್ನು ಏರ್ಪಡಿಸಿದ್ದ ರಾತ್ರಿ ಪರ್ಶಿಯನ್ ರಾಜ ಯೂಫ್ರೆಟಿಸ್ ನದಿಯನ್ನು ಬೇರೆ ಕಡೆಗೆ ಹರಿಯುವಂತೆ ಮಾಡಿ ನದಿ ಪಾತ್ರವನ್ನು ಅನುಸರಿಸಿ, ಬ್ಯಾಬಿಲೋನಿನ ಒಳಕ್ಕೆ ಪ್ರವೇಶ ಮಾಡಿದನು, ಪಟ್ಟಣವನ್ನು ಆಶ್ಚರ್ಯರೀತಿಯಲ್ಲಿ ವಶ ಮಾಡಿಕೊಂಡನು.

ಪ್ರಕ 16:12 ರಲ್ಲಿ ಯೂಫ್ರೆಟಿಸ್ ನದಿ ಬತ್ತಿ ಹೋದುದನ್ನು ಸಾಂಕೇತಿಕವಾಗಿ ಅಂತ್ಯಕಾಲದ ಬ್ಯಾಬಿಲೋನು ಬಿದ್ದು ಹೋದುದನ್ನು ಹೇಳುತ್ತದೆ. ಯಾಕೆಂದರೆ ಪ್ರಕಟನೆಯಲ್ಲಿ ಯೂಫ್ರೆಟಿಸ್ ಎಂಬುದು ಬ್ಯಾಬಿಲೋನಿಗೆ ಲೋಕದ ನಾಗರೀಕ, ಜಾತ್ಯಾತೀತ, ರಾಜಕೀಯ ಅಧಿಕಾರ ಬೆಂಬಲವನ್ನು ಪ್ರತಿನಿಧಿಸುತ್ತದೆ.

ಯೂಫ್ರೆಟಿಸ್ ಇಂಗಿಹೋಯಿತು ಎನ್ನುವುದು ಆ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಂಡುದ್ದನ್ನು ಸಂಕೇತಿಸುತ್ತದೆ, ನಂತರದ ಆಕ್ರಮಣ ಅದಕ್ಕೆ ಅವನತಿ ಉಂಟಾಗುತ್ತದೆ.

ಪ್ರಪಂಚದಲ್ಲಿರುವ ಜನರು ಪ್ರಕೃತಿಯಲ್ಲಿನ ಅಲ್ಲೋಲ ಕಲ್ಲೋಲಕ್ಕೆ ಸಾಕ್ಷಿಯಾಗುತ್ತಾರೆ (ಪ್ರಕ 16:3–9) ಅವರು ಸಂರಕ್ಷಣೆಗಾಗಿ ಬ್ಯಾಬಿಲೋನಿಗೆ ತಿರುಗಿಕೊಳ್ಳುತ್ತಾರೆ. ಆದಾಗ್ಯೂ ಐದನೇ ಉಪದ್ರವವು ಬ್ಯಾಬಿಲೋನಿನ ಅಧಿಕಾರಕ್ಕೆ ಬಡಿದಾಗ (ಪ್ರಕ 16:10,11) ಸಹಾಯವನ್ನು ಬಯಸುವ ನಿಷ್ಪ್ರಯೋಜಕತೆಯನ್ನು ಕಾಣುತ್ತಾರೆ. ತಮಗೆ ಮೋಸವಾಯಿತೆಂದು ಭಾವಿಸಿ ಬ್ಯಾಬಿಲೋನಿಗೆ ವಿರೋಧವಾಗಿ ತಿರುಗಿ ಬೀಳುತ್ತಾರೆ. ಆಗ ಅದರ ಅವನತಿಯಾಗುತ್ತದೆ (ಪ್ರಕ 17:16). ಆದಾಗ್ಯೂ ಅವರ ಹೃದಯಗಳು ದೇವರಿಗೆ ಮತ್ತು ಆತನ ಜನರಿಗೆ ವಿರೋಧವಾಗಿ ಉಳಿಯುತ್ತವೆ. ಅವರು ಸೈತಾನನ ಅಂತಿಮ ಮೋಸಕ್ಕೆ ಫಲವತ್ತಾದ ಮಣ್ಣಾಗಿರುತ್ತಾರೆ. ಸೈತಾನನು ದೇವ ಜನರನ್ನು ಭೂಮಿಯಿಂದ ಅಳಿಸಿ ಬಿಡಲು ಇಡೀ ಲೋಕವನ್ನೇ ಅವರ ವಿರುದ್ಧವಾಗಿ ನಿಲ್ಲುವುದಕ್ಕೆ ಬಂದು ಮಾಡುತ್ತಾನೆ.

ನಮ್ಮ ಭರವಸೆಯನ್ನು ಮಾನವರ ಮತ್ತು ಮಾನವ ಸಂಸ್ಥೆಗಳ ಮೇಲೆ ಇಡುವುದು ಎಷ್ಟು ಅಪಾಯಕರವೆಂದು ಯಾವ ಬಗೆಯಲ್ಲಿ ಕಲಿತಿದ್ದೇವೆ?

**ಬುಧವಾರ** **ಮಾರ್ಚ್ 13**

## ಸೈತಾನನ ಕಡೆಯ ಮಹಾವಂಚನೆ

ಪ್ರಕ 16:12 ಯೂಫ್ರೆಟಿಸ್ ನದಿ ಇಂಗಿ ಹೋಗುವ ಉದ್ದೇಶವು ಪೂರ್ವದೇಶದ ರಾಜರಿಗೆ ಮಾರ್ಗವನ್ನು ಸಿದ್ಧಪಡಿಸುವುದೇ ಆಗಿದೆ. ಹಳೆಯ ಒಡಂಬಡಿಕೆಯಲ್ಲಿ ಪೂರ್ವದಿಂದ ಬರುವ ಅರಸು ಎಂದರೆ ಸೈರಸ್ ಮತ್ತು ಆತನ ಸೇನೆಯು ಉತ್ತರದಿಂದ ಬರುತ್ತದೆ. ಬ್ಯಾಬಿಲೋನನ್ನು ಪೂರ್ವದಿಂದ ಬಳಿ ಸಾರುತ್ತದೆ (ಯೆಶಾಯ 41:25). ಬ್ಯಾಬಿಲೋನಿನ ಮೇಲೆ ಅವರು ಜಯ ಸಾಧಿಸುತ್ತಾರೆ. ಆವಾಗ ದೇವಜನರು ತಮ್ಮ ಸ್ವದೇಶಕ್ಕೆ ಬರಲು ಸಾಧ್ಯವಾಗುತ್ತದೆ (ಯೆಶಾ 44:27,28). ಹಾಗೆಯೇ ಯೂಫ್ರೆಟಿಸ್ ನದಿಯು ಇಂಗಿ ಹೋಗುತ್ತದೆ ಎಂಬುದು ಸಾಂಕೇತಿಕವಾಗಿದ್ದು ಅಂತ್ಯಕಾಲದ ದೇವಜನರನ್ನು ವಿಮೋಚಿಸುವ ಸಲುವಾಗಿ ಪೂರ್ವದಿಂದ ಬರುವ ರಾಜರಿಗೆ ಮಾರ್ಗವನ್ನು ಸಿದ್ಧಮಾಡಿಕೊಡುತ್ತದೆ ಎಂಬುದನ್ನು ಸೂಚಿಸುತ್ತದೆ.

ಪ್ರಕಟನೆ 16:21ರಲ್ಲಿರುವ ಪೂರ್ವದಿಂದ ಬರುವ ರಾಜರು ಎಂದರೆ ಯೇಸು ಕ್ರಿಸ್ತನು ಮತ್ತು ಅವನ ದೂತನ ಸೈನ್ಯ. ಆತನು ಎರಡನೆ ಸಲ ಬರುವಾಗ ಪರಲೋಕದ ದೂತ ಸೈನ್ಯದೊಂದಿಗೆ ಪ್ರತ್ಯಕ್ಷನಾಗುತ್ತಾನೆ. ಅವರು ಪರಿಶುದ್ಧವಾದ ಮತ್ತು ನಿರ್ಮಲವಾದ ನಯವಾದ ನಾರುಮಡಿಯು (ಪ್ರಕ 19:14) ಧರಿಸಿಕೊಂಡಿರುತ್ತಾರೆ. ಇದು ಪಾಪವಿಲ್ಲದ ಪರಿಶುದ್ಧ ದೂತರ ವಸ್ತ್ರಗಳು (ಪ್ರಕ 15:6). ಕ್ರಿಸ್ತನು ಪರಲೋಕ ದೂತಸೈನ್ಯದ ಸಂಗಡ ಬರುವವನಾಗಿ ತನ್ನ ಜನರನ್ನು ಹಿಂಸಿಸುವ ಸೈತಾನನ ಬಲವನ್ನು ಗೆಲ್ಲುತ್ತಾನೆ (ಮತ್ತಾ 24:30,31) ಎಂದು ಪ್ರಕ 17:14 ತೋರಿಸುತ್ತದೆ. ಈ ಅಂತಿಮ ಹೋರಾಟ ಕ್ರಿಸ್ತನ ಮತ್ತು ಆತನ ಜನರ ವಿರುದ್ಧವಾಗಿ ನಡೆಯುವ ಅಂತಿಮ ಹೋರಾಟವು ಎರಡನೆ ಬರೋಣಕ್ಕೆ ನಡೆಸುತ್ತದೆ ಇದುವೆ "ಹರ್ಮಗೆದೋನ್ ಯುದ್ಧ".

**ಪ್ರಕಟನೆ 16:13,14ನ್ನು ಓದಿರಿ. ಹರ್ಮಗೆದೋನ್ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳಲು ಈ ಮೂರು ಅಶುದ್ಧಾತ್ಮಗಳು ಯಾವ ಪಾತ್ರವನ್ನು ವಹಿಸುತ್ತವೆ? ಕಪ್ಪೆಗಳು ಮೂರು ದೂತರ ಸಂದೇಶಗಳಿಗೆ ವಿರೋಧವಾಗಿ ಸೈತಾನನು ಮಾಡಿದ 'ನಕಲು' ಆಗಿದೆ ಹೇಗೆ?**

ಈ ಅಂತಿಮ ಘಟನೆಗಳ ಮುಖಾಂತರ ಕೃಪಾಕಾಲವು ಮುಕ್ತಾಯವಾಗುವವರೆಗೂ ಪ್ರತಿಯೊಬ್ಬ ಮನುಷ್ಯನು ಹರ್ಮಗೆದೋನ್ ಯುದ್ಧದಲ್ಲಿ ಎರಡು ಪಕ್ಷಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ನಡೆಸಲ್ಪಡುತ್ತಾನೆ. ಈ ಆತ್ಮೀಕ ಯುದ್ಧಕ್ಕೆ ಮುನ್ನುಡಿ (ಪೀಠಿಕೆ)ಯಂತೆ ಯೋಹಾನನು ಮೂರು ಅಶುದ್ಧ ಕಪ್ಪೆಗಳನ್ನು ಹೋಲುವ ದೆವ್ವದ ಆತ್ಮಗಳನ್ನು ನೋಡುತ್ತಾನೆ. ಸೈತಾನನು ಜನರನ್ನು ವಂಚಿಸಲು ಮಾಡುವ ಕಡೆಯ ಪ್ರಯತ್ನವು ದೆವ್ವಗಳು ಮತ್ತು ಸುಳ್ಳು ಆತ್ಮಗಳನ್ನು ಒಳಗೊಂಡಿದೆ.

ಘಟಸರ್ಪವು (ಅನ್ಯಧಾರ್ಮಿಕತೆ ಮತ್ತು ಬೇತಾಳಿಕತೆ), ಸಮುದ್ರದ ಮೃಗ (ರೋಮನ್ ಕಥೋಲಿಕತ್ವ) ಮತ್ತು ಸುಳ್ಳು ಪ್ರವಾದಿ (ಮಿಥ್ಯ ಪ್ರೊಟೆಸ್ಟೆಂಟತ್ವ) ಸೈತಾನನ ಆಜ್ಞೆಯಂತೆ ಬಂದಾಗುತ್ತವೆ (ಪ್ರಕ 13:11, 12). ಟಗರಿನ ಹಾಗೆ ಕೊಂಬಿರುವ ಮೃಗ ಅದ್ಭುತಗಳನ್ನು ಮಾಡುವಂತೆ ಸೈತಾನನು ಅದನ್ನು ಶಕ್ತಿಗೊಳಿಸುತ್ತಾನೆ (ಪ್ರಕ 13:13–17).

ಅದ್ಭುತಗಳು–ಬೇತಾಳಿಕ ಪ್ರಕಟನೆಗಳನ್ನ್ ಒಳಗೊಂಡಿರುತ್ತದೆ. ಈ ಚಿಹ್ನೆಗಳ ಲೋಕವು ದೇವರನ್ನು ಹಿಂಬಾಲಿಸುವುದಕ್ಕಿಂತ ತನ್ನನ್ನು ಹಿಂಬಾಲಿಸುವಂತೆ ಸೈತಾನನು ಮಾಡುವ ತಂತ್ರಗಾರಿಕೆಗಳಾಗಿವೆ.

ದೇವರನ್ನೂ ಆತನ ಸತ್ಯವನ್ನೂ ದ್ವೇಷಿಸುವುದರಿಂದ ಕುರುಡರಾಗಿರುವ ಈ ಲೋಕದ ನಾಯಕರುಗಳು ಸೈತಾನನ ಸುಳ್ಳುಗಳನ್ನು ನಂಬುತ್ತಾರೆ, ಕಡೆಯದಾಗಿ ಆ ಸುಳ್ಳುಗಳು ಹಿತವಾದ ಧಾರ್ಮಿಕ ವೇಷದ ಉಡುಪುಗಳಾಗಿವೆ (2 ಥೆಸ 2:9–12) ಅವರು ಲೋಕಾಂತ್ಯದವರೆಗೆ ನಡೆಯುವ ಅಂತಿಮ ಯುದ್ಧಗಳಿಗೆ ಒಂದಾಗಿ ನಿಲ್ಲುತ್ತಾರೆ.

# ಹರ್ಮಗದೋನ್ ಯುದ್ಧಕ್ಕೆ ಒಟ್ಟುಗೂಡುವುದು

**ಹರ್ಮಗೆದೋನ್ ಯುದ್ಧಕ್ಕೆ ಲೋಕದ ಜನರನ್ನು ಒಟ್ಟುಗೂಡಿಸುವ ಅಂತ್ಯಕಾಲದ ವಂಚನೆಯಲ್ಲಿ ಸೈತಾನನು ಎಷ್ಟು ಯಶಸ್ವಿಯಾಗುತ್ತಾನೆ?**

ವಂಚನೆಯುಕ್ತ ದೆವ್ವದ ಅದ್ಭುತಗಳು ಪ್ರಪಂಚದಾದ್ಯಂತ ಯಶಸ್ಸನ್ನು ಸಾಧಿಸುತ್ತವೆ ಅಂದರೆ ಜನರು ಸತ್ಯವೇದದ ಉಪದೇಶಗಳನ್ನು ಧಿಕ್ಕರಿಸಿ ವಂಚನೆಯುಕ್ತ ಅದ್ಭುತಗಳಿಂದ ಸುಳ್ಳನ್ನು ನಂಬುವಂತೆ ಮಾಡುತ್ತವೆ (2 ಥೆಸ 2:9–12).

ಒಂದು ಉದ್ದೇಶ ಪೂರ್ವಕವಾಗಿ ಅವರೆಲ್ಲಾ ಒಂದಾಗುತ್ತಾರೆಂಬುದು, ಅವರು ಒಂದು ಸ್ಥಳದಲ್ಲಿ ಒಟ್ಟುಗೂಡುವುದನ್ನು ಸಾಂಕೇತಿಸುತ್ತದೆ. ಆ ಸ್ಥಳವು ಇಬ್ರಿಯ ಭಾಷೆಯಲ್ಲಿ 'ಹರ್ಮಗೆದೋನ್' ಎಂದು ಕರೆಯಲ್ಪಡುತ್ತದೆ. ಹರ್ಮಗೆದೋನ್ ಎಂದರೆ 'ಮೆಗಿದ್ದೋ ಬೆಟ್ಟ'. ಮೆಗಿದ್ದೋ ಎಂಬುದು ವಾಸ್ತವವಾಗಿ ಒಂದು ಪರ್ವತವಲ್ಲ. ಆದರೆ ಯೆಜ್ರೇಲಿನ ಕಣಿವೆಯಲ್ಲಿ ಇರುವ ಕೋಟೆಗಳುಳ್ಳ ನಗರವಾಗಿದೆ (ಇಲ್ಲವೇ ಎಸ್‌ಡ್ರಾಲನ್ ಪ್ರದೇಶ) ಕಾರ್ಮೆಲ್ ಬೆಟ್ಟದ ಕಿಬ್ಬರಿಯಲ್ಲಿದೆ. ಇದು ಒಂದು ಪ್ರಮುಖವಾದ ತಂತ್ರಗಾರಿಕೆಯ ಪ್ರದೇಶ.

ಎಸ್‌ಡ್ರಾಲನ್ ಸಮತಟ್ಟಿನ ಪ್ರದೇಶವು ಇಸ್ರಾಯೇಲ್ ಚರಿತ್ರೆಯಲ್ಲಿ ನಿರ್ಣಾಯಕ ಯುದ್ಧಗಳಿಗೆ ಪ್ರಸಿದ್ಧವಾಗಿದೆ (ನ್ಯಾಯ 5:19, 6:33, 2 ಅರಸು 9:27, 23:29,30).

ಪ್ರಕಟನೆಯು ಈ ಚರಿತ್ರೆಯ ಹಿನ್ನೆಲೆಯನ್ನು ಉಪಯೋಗಿಸಿಕೊಂಡು ಅಂತಿಮ ಮಹಾಹೋರಾಟ ಹರ್ಮಗೆದೋನ್‌ನನ್ನು ಚಿತ್ರಿಸುತ್ತದೆ. ಈ ಹೋರಾಟ ಕ್ರಿಸ್ತನಿಗೂ ದುಷ್ಟ ಬಲಕ್ಕೂ ಮಧ್ಯೆ ನಡೆಯುತ್ತದೆ. ಲೋಕದ ಜನರನ್ನು ಈ ಸೈತಾನಿಕ ಒಕ್ಕೂಟದ ನಾಯಕತ್ವದಿಂದ ಒಂದಾಗುವ ಸೈನ್ಯದಂತೆ ಚಿತ್ರಿಸಲ್ಪಟ್ಟಿದೆ.

ಪುರಾತನ ಮೆಗಿದ್ದೋ ಕಟ್ಟಲ್ಪಟ್ಟಿರುವ ಕಣಿವೆಯಲ್ಲಿ ಗೋಪುರದಂತಿದ್ದ ಕಾರ್ಮೆಲ್ ಬೆಟ್ಟವನ್ನು ಸೂಚಿಸುವ ಉಲ್ಲೇಖವಾಗಿದೆ. ಇಸ್ರಾಯೇಲ್ಯರ ಚರಿತ್ರೆಯಲ್ಲಿ ಕರ್ಮೆಲ್ ಬೆಟ್ಟವು ದೇವರ ನಿಜ ಪ್ರವಾದಿಯಾದ ಎಲೀಯ ಮತ್ತು ಬಾಜ್

ದೇವತೆಯ ಸುಳ್ಳು ಪ್ರವಾದಿಗಳ (1 ಅರಸು 18ನೇ ಅಧ್ಯಾಯ) ನಡುವೆ ದೊಡ್ಡ ಘರ್ಷಣೆ ನಡೆದ ಜಾಗವಾಗಿದೆ. ಈ ಮುಖಾಮುಖಿಯ ಉತ್ತರವು ಸತ್ಯವಾದ ದೇವರು ಯಾರು ಎಂಬುದಕ್ಕೆ ಉತ್ತರಕೊಟ್ಟಿತು. ಪರಲೋಕದಿಂದ ಬಂದ ಬೆಂಕಿಯು ಕರ್ತನೇ ನಿಜವಾದ ದೇವರು ಎಂಬುದನ್ನು ಆತನೊಬ್ಬನನ್ನೇ ಆರಾಧಿಸಬೇಕೆಂಬುದನ್ನು ಸಾಭೀತು ಮಾಡಿತು. ಹರ್ಮಗೆದೋನ್ ಯುದ್ಧದ ಆತ್ಮೀಕವಾದವು ನಾವು ಯಾರಿಗೆ ವಿಧೇಯರಾಗಬೇಕು ದೇವರಿಗೆ ಇಲ್ಲವೇ ಮನುಷ್ಯರಿಗೆ ಎಂಬುದು ಉಪದ್ರವಗಳು ಉಂಟಾಗುವುದಕ್ಕಿಂತ ಮುಂಚೆಯೇ ನಿರ್ಧಾರವಾಗುತ್ತದೆ. ಯಾರ್‍ಯಾರು ಘಟಸರ್ಪದ, ಮೃಗದ ಮತ್ತು ಸುಳ್ಳು ಪ್ರವಾದಿಯ (ಪಕ 16:13) ಪಕ್ಷವನ್ನು ವಹಿಸುವರು ಪೂರ್ಣವಾಗಿ ಸೈತಾನನಿಂದ ನಿಯಂತ್ರಿಸಲ್ಪಡುವರು, ಹೇಗೆ ಯೂದನು ಯೇಸುಕ್ರಿಸ್ತನನ್ನು ಶಿಲುಬೆಗೆ ಏರಿಸುವ ಹಾಗೆ ನಡೆಸಲ್ಪಟ್ಟನೋ ಹಾಗೇ (ಲೂಕ 22:3).

ಸೋತಪಕ್ಷವನ್ನು ಆಯ್ದುಕೊಂಡವರಾಗಿ "ಬೆಟ್ಟಗಳೇ ನಮ್ಮ ಮೇಲೆ ಬೀಳಿರಿ" ಎಂದು ಕೂಗುವವರಾಗಿರುತ್ತಾರೆ (ಪ್ರಕ 6:13, 2 ಥೆಸ 1:7,8ನ್ನು ಓದಿರಿ). ಉಪದ್ರವಗಳು ಬೀಳುವ ಮುನ್ನ ಪ್ರಕ 13:13,14 ಚಿತ್ರಿಸುವ ಹಾಗೆ ಭೂಮಿಯ ಮೇಲಿಂದ ಏರಿಬಂದ ಮೃಗವು ಬೆಂಕಿಯು ಆಕಾಶದಿಂದ ಇಳಿದು ಬರುವ ಹಾಗೆ ಮಾಡಿ ಲೋಕದ ಜನರನ್ನು ವಂಚಿಸುತ್ತದೆ. ಇದು ಬೇರೊಂದು ಆತ್ಮವು ನಡೆಸುವ ಮಿಥ್ಯವಾದ ಪುನರುಜ್ಜೀವವನ್ನು ಒಳಗೊಂಡಿದೆ.

ಹರ್ಮಗೆದೋನ್ ಯುದ್ಧವು ಮಿಲಿಟರಿ ಸೈನ್ಯವು ರಾಷ್ಟ್ರಗಳ ಮಧ್ಯಪೂರ್ವದಲ್ಲಿ ನಡೆಸುವ ಯುದ್ಧವಲ್ಲ, ಆದರೆ ಇದು ಯೇಸುಕ್ರಿಸ್ತನು ಅಂಧಕಾರ ಶಕ್ತಿಗಳನ್ನು ಎದುರಿಸುವ ಒಂದು ಆತ್ಮೀಕ ಯುದ್ಧವಾಗಿದೆ (2 ಕೋರಿ 10:4). ಇದರ ಪರಿಣಾಮವು ಕಾರ್ಮೆಲ್ ಬೆಟ್ಟದಲ್ಲಿ ನಡೆದಂತೆ ಇರುತ್ತದೆ. ಆದರೆ ಇದು ಪ್ರಪಂಚದಾದ್ಯಂತ ನಡೆಯುತ್ತದೆ. ದೇವರು ಅಂಧಕಾರ ಬಲಗಳ ಮೇಲೆ ಮಾಡುವ ವಿಜಯೋತ್ಸವ ಇದಾಗಿರುತ್ತದೆ.

**ಬಹಳ ವರ್ಷಗಳಿಂದಲೂ ಜನರು ರಾಜಕೀಯ ಮತ್ತು ಸೈನ್ಯದ ಗಲಭೆಯನ್ನು ಮಧ್ಯಪೂರ್ವದಲ್ಲಿ ಹರ್ಮಗೆದೋನಿನ ಮುಕ್ತಾಯದ ಚಿಹ್ನೆಯಂತೆ ನೋಡುತ್ತಿದ್ದಾರೆ.**

**ಅನೇಕ ಭವಿಷ್ಯ ನುಡಿಗಳು, ದಿನಾಂಕಗಳು, ಗೊತ್ತು ಮಾಡಿದ್ದಾಗ್ಯೂ, ಹರ್ಮಗೆದೋನ್ ಮನಸ್ಸಿನಲ್ಲಿ ಕಲ್ಪಿಸಿಕೊಂಡಂತೆ ಇನ್ನೂ ಬಂದಿಲ್ಲ. ಇಂತಹದೇ ತಪ್ಪುಗಳನ್ನೆಸೆಗುವ ಕೇವಲ ಒಂದು ಜಾಗದಲ್ಲಿ ನಡೆಯುವ ಘಟನೆಗಳನ್ನು ಸತ್ಯವೇದದ ಪ್ರವಾದನೆಯ ತಪ್ಪಾಗಿ ಅರ್ಥೈಸುವಂತಹ ತಪ್ಪುಗಳನ್ನು ನಾವು ಮಾಡದ ಹಾಗೆ ನಮ್ಮನ್ನು ನಾವು ಹೇಗೆ ಕಾಯ್ದುಕೊಳ್ಳಬಹುದು?**

**ಶುಕ್ರವಾರ** **ಮಾರ್ಚ್ 15**

**ಹೆಚ್ಚಿನ ಚಿಂತನೆ :** ಸತ್ಯವೇದದ ಸತ್ಯಗಳಿಂದ ತಮ್ಮ ಮನಸ್ಸನ್ನು ದೃಢ ಪಡಿಸಿಕೊಂಡವರು ಮಾತ್ರ ಮಹಾಹೋರಾಟದಲ್ಲಿ ನಿಂತುಕೊಳ್ಳಬಲ್ಲರು. ಮನುಷ್ಯನಿಗಿಂತ ದೇವರಿಗೆ ವಿಧೇಯನಾಗುವ ವಿಷಯದಲ್ಲಿ ಪ್ರತಿ. ಆತ್ಮಗಳಿಗೂ ಶೋಧನೆ ಉಂಟಾಗುತ್ತದೆ. ಕಡೆಯ ದಿನಗಳಲ್ಲಿ ಜನರು ಸ್ವಸ್ಥ ಬೋಧನೆಯನ್ನು ಸಹಿಸಲಾರರು ಎಂಬುದಾಗಿ ಅಪೋಸ್ತಲ ಪೌಲನು ಹೇಳುತ್ತಾನೆ (2 ತಿಮೊ 4:3). ಅಂತಹ ಸಮಯವು ಪೂರ್ಣವಾಗಿ ಬಂದಿದೆ, ಜನರು ಸತ್ಯವೇದದ ಸತ್ಯಗಳನ್ನು ತಿರಸ್ಕರಿಸುತ್ತಾರೆ. ಯಾಕೆಂದರೆ ಅವು ಅವರ ಪಾಪದ ಆಸೆಗಳನ್ನು ಲೋಕವನ್ನು ಪ್ರೀತಿಸುವ ಹೃದಯಗಳನ್ನೂ, ಅಡ್ಡಿಪಡಿಸುತ್ತವೆ ಮತ್ತು ಸೈತಾನನು ಅವರಿಗೆ ಇಷ್ಟವಾಗುವಂತೆ ವಂಚನೆಗಳನ್ನು ಒದಗಿಸಿಕೊಡುತ್ತಾನೆ. ಆದರೆ ದೇವರು ಈ ಭೂಮಿಯ ಮೇಲೆ ಸತ್ಯವೇದವನ್ನು ಕಾಪಾಡುವ ಜನರನ್ನು ಇಟ್ಟಿದ್ದಾನೆ. ಸತ್ಯವೇದವು ಅವರ ಉಪದೇಶಗಳಿಗೆ ಪ್ರಮಾಣವಾಗಿರುತ್ತದೆ ಮತ್ತು ಸುಧಾರಣೆಗಳಿಗೆ ಆಧಾರವಾಗಿರುತ್ತದೆ.

ವಿದ್ಯಾವಂತರ ಅಭಿಪ್ರಾಯಗಳು, ವಿಜ್ಞಾನದ ಊಹೆಗಳು, ಸುವಾರ್ತೆ ಪ್ರಚಾರಕರ ನಿರ್ಣಯಗಳು, ಬಹುಸಂಖ್ಯಾ ಪ್ರತಿನಿಧಿಸುವ ಸಭೆಗಳು, ಎಷ್ಟು ಸಭೆಗಳಿವೆಯೋ ಅಷ್ಟು ಬಗೆಯ ಉಪದೇಶಗಳು ಇರುತ್ತವೆ. ಒಂದು ಸಭೆಯ ಉಪದೇಶವನ್ನು ಇನ್ನೊಂದು ಸಭೆಯು ಒಪ್ಪುವುದಿಲ್ಲ. ಹೀಗಿರುವಾಗ ಇವುಗಳಲ್ಲಿ ಒಂದನ್ನಾದರೂ ಅಥವಾ ಎಲ್ಲವುಗಳನ್ನು ನಮ್ಮ ಧಾರ್ಮಿಕ ನಂಬಿಕೆಗೆ ಪರವಾದ ಅಥವಾ ವಿರೋಧವಾದ ಪುರಾವೆಗಳಾಗಿ ಪರಿಗಣಿಸಬಾರದು.

ಯಾವುದೇ ಉಪದೇಶವನ್ನಾಗಲೀ (Doctrine) ನೇಮಗಳನ್ನಾಗಲಿ, ಒಪ್ಪಿಕೊಳ್ಳುವ ಮೊದಲು ನಾವು "ಕರ್ತನು ಇಂತೆನ್ನುತ್ತಾನೆ" ಎಂಬ ನೇರ ನುಡಿಯ ಸಹಾಯವನ್ನು ತೆಗೆದುಕೊಳ್ಳಬೇಕು.

ಕಿರೀಟ ಪ್ರಾಯವಾದ ಮಹಾವಂಚನೆಯ ಪ್ರದರ್ಶನದಲ್ಲಿ ಸ್ವತಃ ಸೈತಾನನು ಯೇಸುಕ್ರಿಸ್ತನ ವೇಷವನ್ನು ಹಾಕುತ್ತಾನೆ. ಯೇಸುಕ್ರಿಸ್ತನ ಆಗಮನದಲ್ಲಿ ತನ್ನ ನಿರೀಕ್ಷೆಯು ಮುಕ್ತಾಯವಾಗುತ್ತದೆ ಎಂಬ ದೀರ್ಘನಂಬಿಕೆ ಸಭೆಗೆ ಇದೆ. ಈ ಸನ್ನಿವೇಶದಲ್ಲಿ ಸೈತಾನನು ಕ್ರಿಸ್ತನು ಬರುವಂತೆಯೇ ಕಾಣಿಸಿಕೊಳ್ಳುತ್ತಾನೆ. ಯೇಸುಕ್ರಿಸ್ತನು ಹೇಗೆ ಬರುತ್ತಾನೆಂದು ಯೋಹಾನನು ಪ್ರಕಟನೆಯಲ್ಲಿ ವಿವರಿಸಿದ್ದಾನೋ ಹಾಗೆಯೇ ಸೈತಾನನು ಕಣ್ಣು ಕೋರೈಸುವ ಪ್ರಕಾಶನದ ರೂಪದಲ್ಲಿ ತನ್ನನ್ನು ಜನರ ನಡುವೆ ಭೂಮಿಯ ಬೇರೆ-ಬೇರೆ ಭಾಗಗಳಲ್ಲಿ ಪ್ರಕಟಿಸಿಕೊಳ್ಳುತ್ತಾನೆ (ಪ್ರಕ 1:13–15).

ನರ ಮನುಷ್ಯರು ಅಂಥಹ ಏನನ್ನು, ಆತನ ಸುತ್ತ ಯಾವುದು ಮೀರಿಸಲಾಗದ ಜನರು ಇನ್ನೂ ನೋಡಿಲ್ಲದ ಪ್ರಭಾವ ತುಂಬಿರುತ್ತದೆ. ಆವಾಗ ವಿಜಯೋತ್ಸವದ ಕೂಗು "ಯೇಸುಕ್ರಿಸ್ತನು ಬಂದನು! ಯೇಸುಕ್ರಿಸ್ತನು ಬಂದನು! ಎಂದು ಗಾಳಿಯಲ್ಲಿ ಮೊಳಗುತ್ತದೆ. ಜನರು ಭಯಭಕ್ತಿಯಿಂದ ಆತನ ಪಾದಗಳಿಗೆ ಎರಗುತ್ತಾರೆ. ಆವಾಗ ಸೈತಾನನು ಮೃದು-ಮಧುರವಾದ, ಕನಿಕರ ತುಂಬಿದ ಧ್ವನಿಯಿಂದ ರಕ್ಷಕನು ನುಡಿದ ದಿವ್ಯವಾದ ಸತ್ಯಗಳನ್ನು ತಾನೂ ನುಡಿಯುತ್ತಾನೆ, ಜನರ ರೋಗಗಳನ್ನು ವಾಸಿಮಾಡುತ್ತಾನೆ. ಕ್ರಿಸ್ತನ ಸ್ವಭಾವವನ್ನು ಧರಿಸಿಕೊಂಡು 'ನಾನು ಸಬ್ಬತ್ತನ್ನು ಭಾನುವಾರಕ್ಕೆ ಬದಲಾಯಿಸಿದ್ದೇನೆ. ಆ ದಿನವನ್ನು ಆಶೀರ್ವದಿಸಿದ್ದೇನೆ, ಆದ್ದರಿಂದ ನೀವು ಭಾನುವಾರವನ್ನು ಪರಿಶುದ್ಧವೆಂದು ಎಣಿಸಬೇಕೆಂದು ಹೇಳುತ್ತಾನೆ'. ಯಾರೂ ಬಿಟ್ಟು ಬಿಡದೆ ಏಳನೇ ದಿನವನ್ನು ಪರಿಶುದ್ಧವೆಂದು ಎಣಿಸುತ್ತಾರೋ, ಅವರು ನಾನು ಕಳುಹಿಸಿದ ಬೆಳಕನ್ನು ಮತ್ತು ಸತ್ಯವನ್ನು ತಿರಸ್ಕರಿಸಿ ದೇವದೂಷಣೆ ಮಾಡುವವರಾಗಿದ್ದಾರೆ ಎಂದು ತೀರ್ಮಾನಿಸುತ್ತಾನೆ. ಇದು ಪ್ರಬಲವಾದ ಮತ್ತು ಸಂಪೂರ್ಣವಾಗಿ ವಶಪಡಿಸಿಕೊಳ್ಳುವಂತಹ ಭ್ರಾಂತಿಯಾಗಿದೆ. ಎಲೆನ್ ಜಿ ವೈಟ್, ಮಹಾಹೋರಾಟ, ಪುಟ 593–595, 624.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರಕ 16:15 ರಲ್ಲಿರುವ ಯೇಸುಕ್ರಿಸ್ತನ ಎಚ್ಚರಿಕೆಯು ಹರ್ಮೆಗೆದೋನ್ ಯುದ್ಧಕ್ಕೆ ಹೇಗೆ ಸಿದ್ಧವಾಗುವುದು ಎಂಬುದರ ವಿವರಣೆಯಾಗಿದೆ. ಕ್ರಿಸ್ತನು ಲವೋದಿಕಿಯ ಸಭೆಗೆ ಇದೇ ತೆರನಾದ ಎಚ್ಚರಿಕೆಯ ಮಾತುಗಳು (ಪ್ರಕ 3:18ರಲ್ಲಿ) ವಿನಂತಿಸಿಕೊಳ್ಳುತ್ತಾನೆ. ಅಂತಿಮ ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳುವ ಸಮಯದಲ್ಲಿ ಲವೋದಿಕೀಯ ಸಭೆಯ ದೇವ ಜನರಿಗೆ ಕೊಟ್ಟ ಸಂದೇಶದ ಮಹತ್ವವನ್ನು ಕ್ರಿಸ್ತನ ಮಾತುಗಳು ಹೇಗೆ ತೋರಿಸುತ್ತದೆ? ಈ ಸಂದೇಶವನ್ನು ವೈಯಕ್ತಿಕವಾಗಿ ಹೇಗೆ ಅನ್ವಯ ಮಾಡಿಕೊಳ್ಳುವಿರಿ?

2. ಪರಿಶುದ್ಧವಾದ ಮತ್ತು ನಿರ್ಮಲವಾದ ನಾರುಮುಡಿಯು ಯೇಸುಕ್ರಿಸ್ತನ ನೀತಿಯನ್ನು ಸಂಕೇತಿಸುತ್ತದೆ (ಪ್ರಕ 3:4,5, ಪ್ರಕ 19:7–9). ಯಾರ್‍ಯಾರು ಯೇಸುಕ್ರಿಸ್ತನ ನೀತಿಯ ವಸ್ತ್ರಗಳನ್ನು ಧರಿಸಿಕೊಂಡಿರುತ್ತಾರೋ, ಅವರು ಮಾತ್ರ ಅಂತಿಮ ಹೋರಾಟದಲ್ಲಿ ದೃಢವಾಗಿ ನಿಲ್ಲುತ್ತಾರೆ.

3. ಒಬ್ಬರು ಅಥವಾ ಒಬ್ಬಳು ತನ್ನ ವಸ್ತ್ರಗಳನ್ನು ಯಜ್ಞದ ಕುರಿಯಾದಾತನ ರಕ್ತದಿಂದ ಪರಿಶುದ್ಧವಾಗಿಯೂ ನಿರ್ಮಲವಾಗಿಯೂ ಮಾಡಿಕೊಳ್ಳುವುದು ಹೇಗೆ (ಪ್ರಕ 7:14).